(ಆ) ಆ ತಾಲ್ಲೂಕಿನಲ್ಲಿ ಸಣ್ಣ ಕೆರೆಗಳ ನಿರ್ಮಾಣಕ್ಕೆ ಅವಕಾಶಗಳಿರುವುದು ನಿಜವೇ;

(ಇ) ವೇದಾವತಿ ನದಿ ಬೇಸಿನ್‌ನಲ್ಲಿ ಹೊಸ ಕೆರೆಗಳ ನಿರ್ಮಾಣಕ್ಕೆ ಅಡಚಣೆಗಳೇನಾದರೂ ಇವೆಯೇ;

(ಈ) ಹಾಗಿದ್ದಲ್ಲಿ ಅವುಗಳನ್ನು ನಿವಾರಿಸಿ ಸಣ್ಣ ಕೆರೆಗಳ ನಿರ್ಮಾಣ ಕೈಗೊಳ್ಳಲಾಗುವುದೇ ?

ಶ್ರೀ ಆರ್. ಎನ್. ಲಕ್ಷ್ಮೀಪತಿ (ಸಣ್ಣ ನೀರಾವರಿ ರಾಜ್ಯ ಮಂತ್ರಿಗಳು).—

(ಅ) ಬಂದಿದೆ.

(ಆ) ಇಲ್ಲ.

(ಇ) ವೇದಾವತಿ ನದಿ ಪಾತ್ರದಲ್ಲಿ ಸಣ್ಣ ನೀರಾವರಿ ಕಾಮಗಾರಿಗಳನ್ನು ತೆಗೆದುಕೊಳ್ಳಲು ಸರ್ಕಾರ ನಿಷೇಧಿಸಿದೆ.

(ಈ) ಮೇಲೆ ಹೇಳಿದ 'ಇ' ಪ್ರಶ್ನೆಯ ಉತ್ತರದಿಂದ ಈ ಪ್ರಶ್ನೆ ಉದ್ಭವಿಸುವುದಿಲ್ಲ.

ಶ್ರೀ ಜಿ. ಬಸಪ್ಪ.—ನನ್ನ ಎರಡನೇ ಪ್ರಶ್ನೆಗೆ ಉತ್ತರವಾಗಿ 'ಇಲ್ಲ' ಎಂದು ಹೇಳಿದ್ದಾರೆ. ಆದರೆ ಮಾರ್ಚ್ ತಿಂಗಳ ಬಡ್ಜೆಟ್‌ನಲ್ಲಿ ಈ ಒಂದು ಕೆರೆ ಕಾಮಗಾರಿಗಾಗಿ ಹಣವನ್ನು ಸೇರಿಸಿಲ್ಲವೇ ?

ಶ್ರೀ ಆರ್. ಎನ್. ಲಕ್ಷ್ಮೀಪತಿ.—ಸಣ್ಣ ಕೆರೆಗಳ ನಿರ್ಮಾಣದ ಬಗ್ಗೆ ಸರ್ಕಾರಕ್ಕೆ ಬೇಡಿಕೆಗಳು ಬರುತ್ತಿವೆ. ಆದರೆ ವಾಣಿವಿಲಾಸ ಸಾಗರದಲ್ಲಿರುವಂತಹ ನೀರು ಆ ಭಾಗದ ಅಚ್ಚುಕಟ್ಟಿಗೆ ಸಾಲುವುದಿಲ್ಲವಾದ ಕಾರಣ ಅಲ್ಲಿ ಯಾವುದೇ ಸಣ್ಣ ನೀರಾವರಿ ಕಾಮಗಾರಿಗಳನ್ನು ತೆಗೆದುಕೊಳ್ಳಬಾರದೆಂದು ಸರ್ಕಾರ ಒಂದು ಆಜ್ಞೆ ಹೊರಡಿಸಿದೆ.

ಶ್ರೀ ಜಿ. ಬಸಪ್ಪ.—ಈಗ ಅಲ್ಲಿ ಏತ ನೀರಾವರಿ ಯೋಜನೆ ಮಾಡಿರತಕ್ಕದ್ದು ನಿಜವಲ್ಲವೇ ?

ಶ್ರೀ ಆರ್. ಎನ್. ಲಕ್ಷ್ಮೀಪತಿ.—ಇಲ್ಲಿ ಸಣ್ಣ ಕೆರೆಗಳ ನಿರ್ಮಾಣಕ್ಕೆ ಅವಕಾಶಗಳಿರುವುದು ನಿಜವೇ ಎಂದು ಪ್ರಶ್ನೆ ಕೇಳಿದ್ದಾರೆ. ಆದರೆ ಸರ್ಕಾರ ಸಣ್ಣ ಕೆರೆಗಳ ನಿರ್ಮಾಣವನ್ನು ಈ ಭಾಗದಲ್ಲಿ ನಿಷೇಧ ಮಾಡಿದೆ.

ಶ್ರೀ ಜಿ. ಬಸಪ್ಪ.—ವೇದಾವತಿ ನದಿ ಪಾತ್ರದಲ್ಲಿ ಏತ ನೀರಾವರಿ ಯೋಜನೆಯನ್ನಾದರೂ ಕೈಗೊಳ್ಳಲಾಗುತ್ತದೆಯೇ ?

ಶ್ರೀ ಆರ್. ಎನ್. ಲಕ್ಷ್ಮೀಪತಿ.—ವಾಣೀ ವಿಲಾಸ ಸಾಗರಕ್ಕೆ ಕಡಿಮೆ ನೀರು ಬರುವುದರಿಂದ ಮತ್ತು ಈ ನೀರು ಅಲ್ಲಿನ ಕ್ಯಾಚ್‌ಮೆಂಟ್ ಏರಿಯಾಗಳಿಗೆ ಸಾಕಾಗುವುದಿಲ್ಲವಾದ ಕಾರಣದಿಂದ ಅಲ್ಲಿ ಏತ ನೀರಾವರಿ ಯೋಜನೆಗಳನ್ನು ಕೈಗೊಳ್ಳಲು ಸಾಧ್ಯವಾಗುವುದಿಲ್ಲ.

ವಿಷಯ: ಹರಿಹರ ಪಾಲಿಫೈಬರ್ಸ್‌ನ ಕಲುಷಿತ ನೀರಿನ ಶುದ್ಧೀಕರಣ ವ್ಯವಸ್ಥೆ.

ಪ್ರ. 276 (106) ಶ್ರೀ ಕೆ. ಮಲ್ಲಪ್ಪ (ಹರಿಹರ).— ಮಾನ್ಯ ಕೈಗಾರಿಕಾ ಮಂತ್ರಿಗಳು ಈ ಕೆಳಕಂಡ ಪ್ರಶ್ನೆಗಳಿಗೆ ಉತ್ತರಿಸುವರೇ:—

(ಅ) ಹರಿಹರ ಪಾಲಿಫೈಬರ್ಸ್ ಕಂಪನಿ ಪ್ರಾರಂಭವಾಗಿ ಎಷ್ಟು ದಿವಸಗಳಾದವು;

(ಆ) ಮೇಲ್ಕಂಡ ಕಂಪನಿಗೆ ಲೈಸೆನ್ಸ್ ನೀಡುವಾಗ ಸರ್ಕಾರದವರು ವಿಧಿಸಿದ ಷರತ್ತುಗಳೇನು;

(ಇ) ಅವುಗಳನ್ನು ಕಂಪನಿಯವರು ಪಾಲಿಸುವರೇ; ಇಲ್ಲವಾದಲ್ಲಿ ಕಂಪನಿಯವರ ಮೇಲೆ ಯಾವ ಕ್ರಮಗಳನ್ನು ಕೈಗೊಳ್ಳಲಾಗಿದೆ;

(ಈ) ಮೇಲ್ಕಂಡ ಕಂಪನಿಯಿಂದ ಬಿಡುವ ಮಲಿನವಾದ ನೀರನ್ನು ತುಂಗಭದ್ರಾ ನದಿಗೆ ಹರಿಯಲು ಬಿಡುತ್ತಿರುವುದು ಸರಕಾರದವರೂ ಗಮನಕ್ಕೆ ಬಂದಿದೆಯೇ;

(ಉ) ಈ ಕಂಪನಿಯ ಮಲಿನವಾದ ನೀರು ತುಂಗಭದ್ರಾ ನದಿಯಲ್ಲಿ ಬೆರೆತು ಅಲ್ಲಿನ ಸುತ್ತಮುತ್ತಲಿನ ಜನಗಳಿಗೆ ಮತ್ತು ದನಕರುಗಳಿಗೆ ಕುಡಿಯಲು ಯೋಗ್ಯವಲ್ಲದಿರುವುದು ಹಾಗೂ ಇದರಿಂದ ಅನೇಕ ಜಾನುವಾರುಗಳು ಕರುಳುಬೇನೆಯಿಂದ ಪ್ರಾಣಹಾನಿಯಾಗಿರುವುದು ಹಾಗೂ ಇದರಿಂದ ರೈತರಿಗೆ ಆಗುತ್ತಿರುವ ಹಾನಿ ಸರಕಾರದವರ ಗಮನಕ್ಕೆ ಬಂದಿದೆಯೇ ?

ಶ್ರೀ ಎಸ್. ಆರ್. ಬೊಮ್ಮಾಯಿ (ಕೈಗಾರಿಕಾ ಮಂತ್ರಿಗಳು).—

(ಅ) ಹರಿಹರ ಪಾಲಿಫೈಬರ್ ಕಂಪನಿಯು 31–3–1972 ರಂದು ಸ್ಥಾಪಿತವಾಗಿದ್ದು ಇಂದಿಗೆ 11 ವರ್ಷಗಳಾಗಿವೆ.

(ಆ) ಕೇಂದ್ರ ಸರ್ಕಾರವು ಕಂಪನಿಗೆ ಲೈಸನ್ಸ್‌ನ್ನು ಮಂಜೂರು ಮಾಡುವಾಗ ವಿಧಿಸಿದ ಷರತ್ತುಗಳು ಇದರೊಡನೆ ಲಗತ್ತಿಸಿರುವ ನಕಲಿನಲ್ಲಿದೆ.

(ಇ) ಕಲುಷಿತ ನೀರನ್ನು ಶುದ್ಧಿಗೊಳಿಸುವ ಷರತ್ತನ್ನು ಬಿಟ್ಟು ಉಳಿದವುಗಳನ್ನು ಪಾಲಿಸಿರುವರು. 1974 ರಲ್ಲಿ ಕರ್ನಾಟಕ ರಾಜ್ಯ ನಿಯಂತ್ರಣ ಮಂಡಲಿ ಪ್ರಾರಂಭವಾದಾಗಿನಿಂದಲೂ ಪೂರ್ಣ ಸಂಸ್ಕರಣ ಘಟಕಗಳನ್ನು ಹಾಕಲು ಕಾರ್ಖಾನೆಗೆ ಒತ್ತಾಯ ಮಾಡುತ್ತಲಿದೆ. ಸರ್ಕಾರದ ವಿವಿಧ ಇಲಾಖೆಗಳೊಂದಿಗೆ ಮತ್ತು ವ್ಯವಸಾಯ ವಿಶ್ವವಿದ್ಯಾನಿಲಯಗಳೊಂದಿಗೂ ವ್ಯವಹಾರ ಮಾಡಿ ಕಡೆಗೆ 16–12–1981 ರಂದು ಕಲುಷಿತ ನೀರನ್ನು ವ್ಯವಸಾಯಕ್ಕೆ ಉಪಯೋಗಿಸುವ ಯೋಜನೆ ಕಾರ್ಯ ಸಾಧ್ಯವಿಲ್ಲವೆಂದು ತೀರ್ಮಾನಿಸಿದ ಮೇಲೆ ಕಾರ್ಖಾನೆಯವರು ಕಲುಷಿತ ನೀರನ್ನು ನದಿಗೆ ಬಿಡಲು ಯೋಗ್ಯವಾದ ಗುಣಮಟ್ಟವನ್ನು ಹೊಂದಲು ಬೇಕಾದ ಸಂಸ್ಕರಣ ಘಟಕಗಳನ್ನು ಶೀಘ್ರದಲ್ಲೇ ಹಾಕಲು ಕಾರ್ಖಾನೆಗೆ ನಿರ್ದೇಶನ ನೀಡಿತು. ಕಾರ್ಖಾನೆಯು

ಜನವರಿ 1982 ರಲ್ಲಿ ಸಂಪೂರ್ಣ ಸಂಸ್ಕರಣ ಘಟಕಗಳನ್ನು 31–8–1983 ರ ಕಾಲಾವಧಿಯೊಳಗೆ ಕಟ್ಟಲು ಮುಂಬಯಿಯ ಒಂದು ಕಂಪನಿಯನ್ನು ನೇಮಿಸಿತು. ಕಾರ್ಖಾನೆಯ ಕಾರ್ಮಿಕರ ಮುಷ್ಕರದಿಂದ ಈ ಕೆಲಸವನ್ನು ಗೊತ್ತಾದ ಕಾಲಾವಧಿಯಲ್ಲಿ ರೂ. 157·00 ಲಕ್ಷ ಖರ್ಚುಮಾಡಿದರೂ ಪೂರ್ಣಗೊಳಿಸಲಾಗಲಿಲ್ಲ. ಈಗ ಕರ್ನಾಟಕ ಮಾಲಿನ್ಯ ನಿಯಂತ್ರಣ ಮಂಡಲಿ ತನ್ನ 18–8–1983 ರಂದು ನಡೆದ ಸಭೆಯಲ್ಲಿ ಸಂಸ್ಕರಣ ಘಟಕಗಳನ್ನು ಅಳವಡಿಸಿ ಕಾರ್ಯ ರೂಪಕ್ಕೆ ತರಲು ಸದರಿ ಕಾರ್ಖಾನೆಗೆ 31–12–1983 ರವರೆಗೆ ಕಾಲಾವಕಾಶವನ್ನು ನೀಡಲು ತೀರ್ಮಾನಿಸಿದೆ.

(ಈ) ಬಂದಿದೆ.

(ಉ) ಇದರಿಂದ ಜಾನುವಾರುಗಳು ಕರುಳು ಬೇನೆಯಿಂದ ಪ್ರಾಣಹಾನಿಯಾಗಿರುವುದು ಗಮನಕ್ಕೆ ಬಂದಿಲ್ಲ.

REGISTERED

Government of India
Ministry of Industry and Civil Supplies
Department of Industrial Development
(SECRETARIAT FOR INDUSTRIAL APPROVALS)

No. LI : 1100 (74) New Delhi 11, the 5th December, 1974
M/s. Gwalior Rayon Silk Mfg. (Wvg.) Co. Ltd.,
4, UCO Bank Building, 4th Floor,
Parliament Street,
New Delhi 110 001.

Subject : Your application for the grant of an Industrial Licence under the Industries (Development and Regulation) Act, 1951 received on 8–5–1968, for the manufacture of Polynosic fibre falling under scheduled Industry No. 23 (5).

Reference : No. CLP/196/68.

Gentlemen,

With reference to the above application, Government are prepared to issue an Industrial Licence under the Industries (Development and Regulation) Act, 1951 to you for the establishment of a new undertaking in a notified backward area in the State of Karnataka for the manufacture of polynosic fibre upto the capacities specified below on the basis of maximum utilisation of plant and machinery.

Item of manufacture	*Annual Capacity*
Polynosic Fibre	36,500 tonnes (Thirty Six thousand and five hundred tonnes).

2. The issue of the Industrial Licence will be subject to the conditions stipulated in the annexure. It will be further subject to the following additional conditions :—

(i) The import of Capital goods will be settled to the satisfaction of the Government.

(ii) No foreign collaboration will be permitted.

(iii) The applicant shall make the entire quantity of additional production available to the Central Government for distribution.

(iv) Instead of fresh preference issue, the company shall issue fresh equity to the public at the appropriate time in such